ಇ) ಉದ್ಭವಿಸುವುದಿಲ್ಲ.

ಧಾರವಾಡ ನಗರದಲ್ಲಿ ಐ.ಟಿ.ಐ ತರಬೇತಿ ಕೇಂದ್ರ

1749 (2346) ಶ್ರೀ ಬೆಲ್ಲದ್ ಚಂದ್ರಕಾಂತ್ ಗುರಪ್ಪ (ಧಾರವಾಡ) ಮಾನ್ಯ ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಧಾರವಾಡ ನಗರದಲ್ಲಿ ಐ.ಟಿ.ಐ ತರಬೇತಿ ಕೇಂದ್ರವನ್ನು ಎಂದು ಪ್ರಾರಂಭಿಸಲಾಗಿದೆ ಮತ್ತು ಎಷ್ಟು ವಿಭಾಗಗಳು ನಡೆಯುತ್ತಿವೆ.

ಆ) ಇವತ್ತಿನ ಮಾನವ ಸಂಪನ್ಮೂಲದ ಅವಶ್ಯಕತೆ ಗಮನಿಸಿ ಹೊಸ ವಿಭಾಗಗಳನ್ನು ಪ್ರಾರಂಭಿಸುವ ಯೋಜನೆ ಇದೆಯೆ.

ಇ) ಸದರಿ ಐ.ಟಿ.ಐ. ಕೇಂದ್ರಕ್ಕೆ ಸ್ವಂತ ಸುಸಜ್ಜಿತ ಕಟ್ಟಡ ಇದೆಯೆ ಅಥವಾ ಇಲ್ಲವೆ;

ಈ) ಇದಕ್ಕಾಗಿ ಸ್ವಂತ ಕಟ್ಟಡ ಕಟ್ಟಿಸುವ ಯೋಜನೆ ಸರ್ಕಾರಕ್ಕಿದೆಯೆ; ಸದರಿ ಕಟ್ಟಡಕ್ಕಾಗಿ ಹಣ ನಿಗಧಿಮಾಡಿ ಬಿಡುಗಡೆ ಮಾಡಲಾಗುವುದೇ?

ಶ್ರೀ ಖಿರುಮಲ್ ಇಸ್ಲಾಂ (ಕಾರ್ಮಿಕ ಸಚಿವರು)

1. ಪಾರಂಭಿಸಿದ ವರ್ಷ 1999-2000

2. ವೃತ್ತಿಗಳ ವಿವರಗಳು ಈ ಕೆಳಕಂಡಂತಿವೆ:-

ಕ್ರ.ಸಂ.	ವೃತ್ತಿ	ಹಿರಿಯ	ಕಿರಿಯ	ಒಟ್ಟು
1.	ಎಲೆಕ್ಟ್ರೀಷಿಯನ್	16	16	32
2.	ಫಿಟ್ಟರ್	16	16	32
3.	ಎಲೆಕ್ಟ್ರಾನಿಕ್ ಮೆಕ್ಯಾನಿಕ್	16	16	32
4.	ಎಂ.ಆರ್.ಎ.ಸಿ	16	16	32
	ಒಟ್ಟು	64	64	128

ಅ) ಇಲ್ಲ

ಇ) ಇಲ್ಲ

ಈ) ಹೌದು,

ಈ ಬಗ್ಗೆ ಪರಿಶೀಲಿಸಲಾಗುವುದು.

ಕೃಷ್ಣರಾಜಪೇಟೆಯ ಮಿನಿ ವಿಧಾನಸೌಧ ನಿರ್ಮಾಣ

1751 (1930) ಶ್ರೀ ಚಂದ್ರಶೇಖರ್ ಕೆ.ಬಿ. (ಕೆ.ಆರ್. ಪೇಟೆ) ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೃಷ್ಣರಾಜ ಪೇಟೆಯಲ್ಲಿ ಮಿನಿ ವಿಧಾನಸೌಧ ನಿರ್ಮಾಣ ಕಾರ್ಯವನ್ನು ಯಾವಾಗ ಪ್ರಾರಂಭಿಸಲಾಗುತ್ತದೆ; ಮಂಜೂರಾಗಿರುವ ಹಣವೆಷ್ಟು;

ಶ್ರೀ ಹೆಚ್.ಸಿ. ಶ್ರೀ ಕಂಠಯ್ಯ (ಕಂದಾಯ ಸಚಿವರು)

ಅ) ಅಗತ್ಯ ಸಂಪನ್ಮೂಲಗಳನ್ನು ಸಂಗ್ರಹಿಸುವ ಕಾರ್ಯಗತಿ ಅಂತಿಮಗೊಳಿಸುವ ಬಗ್ಗೆ ಸರ್ಕಾರವು ಪರಿಶೀಲಿಸುತ್ತಿದೆ. ಸಂಪನ್ಮೂಲಗಳನ್ನು ಸಂಗ್ರಹಿಸುವ ಕಾರ್ಯ ಸಂಪೂರ್ಣಗೊಂಡ